## ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ ಶಶೀಲ್ ಜಿ ನಮೋಶಿರವರಿಂದ ನಿಯಮ 72ರ ಅಡಿಯಲ್ಲಿ ನೀಡಿರುವ ಗಮನಸೆಳೆಯುವ ಸೂಚನೆಗೆ ಉತ್ತರಿಸುವ ಬಗ್ಗೆ.

**ಸೂಚನೆ:**

ರಾಯಚೂರು ಜಿಲ್ಲೆ ಸಿರವಾರ ತಾಲ್ಲೂಕಿನ ಅತ್ತನೂರು ಗ್ರಾಮಕ್ಕೆ ಸ್ವಾತಂತ್ರ ದೊರಕಿದಾಗಿಂದ ಇಲ್ಲಿಯವರೆಗೂ ತೀವ್ರ ಕುಡಿಯುವ ನೀರಿನ ಸಮಸ್ಯೆ ಇದ್ದು, ಯಾವ ನಿಗಧಿತ ದಿನಾಂಕದೊಳಗೆ ಈ ಸಮಸ್ಯೆಯನ್ನು ಪರಿಹರಿಸಲಾಗುವುದು, ಸದರಿ ಗ್ರಾಮಕ್ಕೆ ವಿವಿಧ ಯೋಜನೆ ಹೆಸರಿನಡಿ ಬಳಕೆಯಾದ ಅನುದಾನ ಸದುಪಯೋಗವಾಗಿದೆಯೇ ಎಂಬುದರ ವಿವರ, ಅತ್ತನೂರು ಗ್ರಾಮಕ್ಕೆ ಕುಡಿಯುವ ನೀರಿನ ಯೋಜನೆಗೆ ಉದ್ದೇಶಿತ 17 ಎಕರೆ 17 ಗುಂಟೆ ಕೆರೆ ನಿರ್ಮಾಣ ಕಾಮಗಾರಿ ಅರ್ಧಕ್ಕೆ ನಿಂತಿದ್ದು, ತಮ್ಮ ಇಲಾಖೆ ಮಾಲೀಕತ್ವದ ಈ ಕೆರೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು ಸದರಿ ಕೆರೆ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಿ, ಅತ್ತನೂರು ಗ್ರಾಮಕ್ಕೆ ಶಾಶ್ವತ ಕುಡಿಯುವ ನೀರಿನ ಸೌಲಭ್ಯ ಒದಗಿಸುವ ಕುರಿತು ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಹೇಳಿಕೆ:**

ರಾಯಚೂರು ಜಿಲ್ಲೆಯ ಸಿರವಾರ ತಾಲ್ಲೂಕಿನ ಅತ್ತನೂರು ಗ್ರಾಮಕ್ಕೆ ಕುಡಿಯುವ ನೀರನ್ನು ಒದಗಿಸಲು, ಅತ್ತನೂರು ಹಾಗೂ ಇತರೆ 7 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯು 2008-09ರಲ್ಲಿ ಮಂಜೂರಾಗಿದ್ದು, ಸದರಿ ಯೋಜನೆಯೊಂದಿಗೆ ಕಲ್ಲೂರು ಹಾಗೂ ಇತರೆ 1 ಗ್ರಾಮದ ಬಹುಗ್ರಾಮ ಕುಡಿಯುವ ನೀರಿನ ಇನ್ನೊಂದು ಯೋಜನೆಯನ್ನು ಕ್ರೂಢೀಕರಿಸಿ ಒಟ್ಟು ಅಂದಾಜು ಮೊತ್ತ ರೂ.760.00ಲಕ್ಷಗಳ ಟೆಂಡರನ್ನು ಶ್ರೀ ಅಮರಖೇಡ್ ಎಸ್ ಎಮ್ ಗುತ್ತಿಗೆದಾರರಿಗೆ ದಿನಾಂಕ:02.02.2009ರಂದು ವಹಿಸಲಾಗಿತ್ತು.

ಈ ಯೋಜನೆಗಳ ಅಂದಾಜು ಪಟ್ಟಿಯಲ್ಲಿ 2 Impounding Reservoir ನಿರ್ಮಾಣ ಮಾಡಲು ಉದ್ದೇಶಿಸಿದ್ದು, ಒಂದನ್ನು ಅತ್ತನೂರು ಗ್ರಾಮದ ಹತ್ತಿರ ಇರುವ ಸರ್ಕಾರಿ ಜಮೀನಿನಲ್ಲಿ ನಿರ್ಮಾಣ ಮಾಡಿ ಅಲ್ಲಿಂದ 8 ಗ್ರಾಮಗಳಿಗೆ ಶುದ್ಧ ಕುಡಿಯುವ ನೀರು ಸರಬರಾಜು ಮಾಡುವುದು ಹಾಗೂ ಇನ್ನೊಂದನ್ನು ಕಲ್ಲೂರು ಗ್ರಾಮದಲ್ಲಿ ನಿರ್ಮಾಣ ಮಾಡಿ 2 ಗ್ರಾಮಗಳಿಗೆ ನೀರು ಸರಬರಾಜು ಮಾಡಲು ಉದ್ದೇಶಿಸಲಾಗಿತ್ತು.

ಸದರಿ ಕಾಮಗಾರಿಗೆ ಅತ್ತನೂರು ಗ್ರಾಮದ ಹತ್ತಿರ Impounding Reservoir ನಿರ್ಮಿಸಲು ಯೋಜಿಸಿದ ಸರ್ಕಾರಿ ಜಮೀನಿನ ಮಣ್ಣು ತಾಂತ್ರಿಕವಾಗಿ ಸೂಕ್ತ ರೀತಿಯಲ್ಲಿ ಇಲ್ಲದಿರುವುದರಿಂದ ಸ್ಥಳ ಬದಲಾಯಿಸಿ ತುಂಗಭದ್ರ ಕಾಲುವೆಯ ಗಣೇಕಲ್ ಬ್ಯಾರೇಜ್ ಕೆಳ ಭಾಗದಲ್ಲಿ ಇದ್ದ ಒಟ್ಟು 17 ಎಕರೆ 17 ಗುಂಟೆ ವಿಸ್ತೀರ್ಣದ ಖಾಸಗಿ ಜಮೀನಿನಲ್ಲಿ Impounding Reservoir ನಿರ್ಮಾಣ ಮಾಡಲು ಯೋಜಿಸಿ ಸದರಿ ಜಮೀನನ್ನು ಸರ್ಕಾರದ ಹೆಸರಿನಲ್ಲಿ ದಿನಾಂಕ:09.02.2018ರಂದು ನೊಂದಣಿ ಮಾಡಿಕೊಳ್ಳಲಾಗಿರುತ್ತದೆ.

ಕಾಮಗಾರಿಗೆ ಅವಶ್ಯವಿರುವ ಜಮೀನನ್ನು ಹಸ್ತಾಂತರ ಮಾಡಿಕೊಳ್ಳುವಲ್ಲಿ ವಿಳಂಬವಾಗಿರುವುದರಿಂದ ಗುತ್ತಿಗೆದಾರರು ಯಾವುದೇ ಪ್ರಕ್ರಿಯೆ ತೋರಿಸಿಲ್ಲವಾದ್ದರಿಂದ ಸದರಿ ಯೋಜನೆಯ ಗುತ್ತಿಗೆದಾರರಿಗೆ ಹಲವಾರು ಬಾರಿ ಕಾಮಗಾರಿಯನ್ನು ಪ್ರಾರಂಭಿಸಲು ಸೂಚಿಸಿದರೂ ಕಾಮಗಾರಿಯನ್ನು ಪುನಃ ಪ್ರಾರಂಭಿಸಿರುವುದಿಲ್ಲ ಹಾಗೂ ಅಂತಿಮ ನೋಟಿಸ್ ನೀಡಿದರೂ ಸಹ ಕಾಮಗಾರಿ ಪ್ರಾರಂಭಿಸದೇ ಇರುವುದರಿಂದ ಅಂತಿಮ ಅಳತೆಗಳನ್ನು ತೆಗೆದುಕೊಂಡು ಪಂಚನಾಮ ಮಾಡಿ Risk and Cost ಆಧಾರದ ಮೇಲೆ ಕರಾರು ಒಪ್ಪಂದವನ್ನು ದಿನಾಂಕ:26.02.2020ರಂದು ಟೆಂಡರ್ ನಿಯಮಾನುಸಾರ ರದ್ದುಗೊಳಿಸಿ ಹಾಗೂ ಗುತ್ತಿಗೆದಾರರ ಪರವಾನಗಿಯನ್ನು ಕಪ್ಪು ಪಟ್ಟಿಗೆ ಸೇರಿಸಲು ಶಿಫಾರಸ್ಸು ಮಾಡಿ ಭದ್ರತಾ ಠೇವಣಿ ಮುಟ್ಟುಗೋಲು ಹಾಕಿಕೊಳ್ಳಲಾಗಿರುತ್ತದೆ.

ರಾಯಚೂರು ಜಿಲ್ಲೆ ಸಿರವಾರ ತಾಲ್ಲೂಕಿನ ಅತ್ತನೂರು ಗ್ರಾಮಕ್ಕೆ ಕುಡಿಯುವ ನೀರು ಒದಗಿಸಲು ಜಲ ಜೀವನ್ ಮಿಷನ್ ಯೋಜನೆ ಅಡಿ ಹಂತ-1ರಲ್ಲಿ ಸದರಿ ಗ್ರಾಮದಲ್ಲಿನ ಎಲ್ಲಾ ಒಟ್ಟು ಮನೆಗಳಿಗೆ ನಳ ಸಂಪರ್ಕ ಕಲ್ಪಿಸಲು ಕಾಮಗಾರಿ ಕೈಗೊಂಡಿದ್ದು, ಪ್ರಗತಿಯಲ್ಲಿರುವ ಕಾಮಗಾರಿಯನ್ನು ಪೂರ್ಣಗೊಳಿಸಿ ಕುಡಿಯುವ ನೀರು ಸರಬರಾಜು ಮಾಡಲು ಯೋಜಿಸಿದೆ. ಕಾಮಗಾರಿಯ ಅನುಮೋದಿತ ಮೊತ್ತ ರೂ.115.00 ಲಕ್ಷಗಳಲ್ಲಿ ರೂ.65.86 ಲಕ್ಷಗಳು ವೆಚ್ಚವಾಗಿ ಹಣ ಸದುಪಯೋಗವಾಗಿರುತ್ತದೆ.

ಮುಂದುವರೆದು, ಅತ್ತನೂರು ಹಾಗೂ ಇತರೆ 7 ಗ್ರಾಮಗಳನ್ನು ಒಳಗೊಂಡಂತೆ ರಾಯಚೂರು ಜಿಲ್ಲೆಯ ಎಲ್ಲಾ ಗ್ರಾಮೀಣ ಜನವಸತಿಗಳಿಗೆ MVS DBOT ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಕಾಮಗಾರಿಯನ್ನು ತೆಗೆದುಕೊಳ್ಳಲಾಗಿರುತ್ತದೆ ಹಾಗೂ ಸದರಿ ಯೋಜನೆಯು ಶೇ.72ರಷ್ಟು ಪೂರ್ಣಗೊಂಡಿದ್ದು, ಪ್ರಗತಿಯಲ್ಲಿರುವ ಕಾಮಗಾರಿಯನ್ನು ಪೂರ್ಣಗೊಳಿಸಿ ಕುಡಿಯುವ ನೀರು ಸರಬರಾಜು ಮಾಡಲು ಯೋಜಿಸಿದೆ. ಕಾಮಗಾರಿಯ ಅನುಮೋದಿತ ಗುತ್ತಿಗೆ ಮೊತ್ತ ರೂ.2292.20 ಕೋಟಿಗಳಲ್ಲಿ ರೂ.1410.27ಕೋಟಿಗಳು ವೆಚ್ಚವಾಗಿ ಹಣ ಸದುಪಯೋಗವಾಗಿರುತ್ತದೆ.

ಸದರಿ ಯೋಜನೆಯ ಗುತ್ತಿಗೆದಾರರಿಗೆ ಮಾರ್ಚ್ -2026ರ ಅಂತ್ಯದೊಳಗೆ MBR-1 ಅಡಿಯಲ್ಲಿ ಬರುವ ಲಿಂಗಸೂಗೂರು ತಾಲ್ಲೂಕಿನ 176 ಜನವಸತಿಗಳಿಗೆ, ಸಿಂಧನೂರು ತಾಲ್ಲೂಕಿನ 244 ಜನವಸತಿಗಳಿಗೆ ಮತ್ತು ಮಾನ್ವಿ ತಾಲ್ಲೂಕಿನ 32 ಜನವಸತಿಗಳಿಗೆ ಒಟ್ಟಾರೆಯಾಗಿ 452 ಜನವಸತಿಗಳಿಗೆ ಕುಡಿಯುವ ನೀರು ಸರಬರಾಜು ಮಾಡಲು ಗುರಿಯನ್ನು ನೀಡಲಾಗಿದೆ. ಯೋಜನೆಯನ್ನು ಪೂರ್ಣಗೊಳಿಸಿ ಯೋಜಿತ ಎಲ್ಲಾ ಜನವಸತಿಗಳಿಗೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸಲು ಯೋಜಿಸಿದೆ.

(ಪ್ರಿಯಾಂಕ್ ಖರ್ಗೆ)

ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು

ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು